<u>ದಿಃ14.09.2023 OS No. 45/2019 PW-3</u>

ದಿಃ14.09.2023 ರಂದು ಸಾಕ್ಷಿಯನ್ನು ಪುನಃ ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಶ್ರೀ. ಎಸ್.ಬಿ.ಡಿ. ವಕೀಲರಿಂದ</u>

ನಾನು 30-35 ವರ್ಷಗಳಿಂದ ಪತ್ರ ಬರಹಗಾರನಾಗಿ ಕೆಲಸ ಮಾಡುತ್ತಿದ್ದೇನೆ. ವಾದಿ ಮತ್ತು ಪ್ರತಿವಾದಿಯು ಕರಾರು ಪತ್ರ ಮಾಡಿಕೊಡುವಂತೆ ಕೇಳಿ ನನ್ನ ಮನೆಯ ಬಳಿ ಬಂದಿದ್ದರು. ಸದರಿಯವರು ಕರಾರು ಪತ್ರ ಮಾಡಿಕೊಡುವಂತೆ ನನ್ನ ಬಳಿ ಬರದ ಕಾರಣ ನನಗೆ ಯಾವುದೇ ವಿಚಾರಗಳು ಗೊತ್ತಿಲ್ಲ ಎಂದರೆ ಸರಿಯಲ್ಲ. ವಾದಿಯು ನನ್ನ ಬಳಿ ಏನೂ ಹೇಳಿರುವುದಿಲ್ಲ. ಯಾವ ಸ್ವತ್ತಿನ ವಿಚಾರವಾಗಿ ನಾನು ಕರಾರು ಪತ್ರವನ್ನು ತಯಾರು ಮಾಡಿರುತ್ತೇನೆ ಎಂದು ಹೇಳಲು ನಾನು ಪತ್ರ ನೋಡಬೇಕು. ನಿಪಿ.1 ರ ಸಾಕ್ಷಿದಾರರು ಯಾವ ವಿಳಾಸದವರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ನಿಪಿ.1 ಅನ್ನು ವಾದಿಯ ಜೊತೆ ಸೇರಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.1 ಕ್ಕೂ ವಾದಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ವಿವರಗಳನ್ನು ನನಗೆ ನೀಡಿದ ಕಾರಣ ನಾನು ನಿಪಿ.1 ಅನ್ನು ತಯಾರು ಮಾಡಿರುತ್ತೇನೆ. ದಾವಾ ಸ್ವತ್ತಿನ ವಿವರವನ್ನು ಪ್ರತಿವಾದಿಯು ನನಗೆ ನೀಡಿದ್ದರು. ಪ್ರತಿವಾದಿಯು ದಾವಾ ಸ್ವತ್ತಿನ ವಿವರಣೆಯನ್ನು ನೀಡಲು ನನ್ನ ಬಳಿ ಬಂದಿರಲಿಲ್ಲ, ನಾನು ನಿಪಿ.1 ಅನ್ನು ವಾದಿಯ ಜೊತೆ ಸೇರಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.